

ಹಗೆಗಳಿಗೂ ಬೇಡ ಅನ್ನಿಸಿತ್ತು. ಆದರೂ ಆ ಪ್ರಶ್ನೆ ಮರುಕಳಿಸುತ್ತಿದ್ದಾಗ ಎದ್ದು ಹುಣಸೆಮರದಡಿ ಗಡಿಗೆಯಲ್ಲಿ ತುಂಬಿಸಿಟ್ಟಿದ್ದ ನೀರಿನಲ್ಲಿ ಒಂದು ಬೊಗಸೆ ತಂದು ಒಣಮಣ್ಣ ಮೇಲೆ ಚಿಮುಕಿಸಿ ಅದರಿಂದೆದ್ದ ವಾಸನೆಯಿಂದ ಆ ಪ್ರಶ್ನೆಯನ್ನು ಅಳಿಸಿ ಹಾಕಲು ಪ್ರಯತ್ನಿಸಿದ.

ಮುಂದಿನ ಬೆಳೆ ಬ್ಯಾಂಕಿನ ಸಾಲ, ಕೈಬದಲು ಸಾಲಗಳನ್ನು ತೀರಿಸುವ ಬೆಳೆಯಾಗಿಬಹುದು. ಸಾಲ ಮಾಡದೆ ಇಡುವಂಥ ಬೆಳೆ ಅದಾಗಿರಬೇಕು ಅಂದುಕೊಂಡ. ಆದರೆ ಅಂತಹದು ಯಾವುದೆಂಬ ಚಿಂತೆ ಹುಟ್ಟಿತು. ಇದಾದೀತು, ಅದಾದೀತು ಅಂದುಕೊಳ್ಳುತ್ತ, ಕಡೆಗೆ ಕೊತ್ತಂಬರಿ ಬೆಳೆ ಇಡುವುದೆಂದುಕೊಂಡ. ಕೈಯಲ್ಲಿ ಬಿತ್ತನೆ ಬೀಜಕ್ಕೂ ಕಾಸಿಲ್ಲವಲ್ಲ ಎಂದು ಪೇಚಾಡಿದ. ಇದಕ್ಕಾದರೂ ಆಗುವಷ್ಟು ದುಡ್ಡು ಈರುಳ್ಳಿಯಿಂದ ಹುಟ್ಟೀತೆ ಎಂದು ಈರುಳ್ಳಿ ರಾಶಿಯತ್ತ ನೋಡಿದ. ಈಗ ಕೊಂಚವಾದರೂ ಬೆಲೆ ಏರಿ ಮಾರಾಟವಾದರೂ ಬೀಜ, ಗೊಬ್ಬರಕ್ಕೆ ತೊಂದರೆಯಾಗದು ಅನ್ನಿಸಿತು. ಆದರೆ ಆ ಲಕ್ಷಣ ಕಾಣುವಂತಿರಲಿಲ್ಲ. ಸಾಲ ಮಾಡುವುದೇ ಹಣೆಬರಹ. ಬ್ಯಾಂಕಿನವರು ಈಗಿರುವ ಸಾಲ, ಅದರ ಬಡ್ಡಿ ತೀರಿಸು ಅನ್ನುತ್ತಾರೆಯೇ ಹೊರತು, ಹೊಸ ಸಾಲ ಕೊಡುವ ಮಾತಾನಾಡುವುದಿಲ್ಲ. ಇನ್ನು ಕೈಬದಲು ಸಾಲ ಕೊಟ್ಟವರಿಗೆ ಬಡ್ಡಿಯನ್ನಾದರೂ ಕೊಡಲಾಗಿರಲಿಲ್ಲ. ಅಂದಮೇಲೆ ಅವರಿಂದ ನಯಾಪೈಸೆಯೂ ಸಿಕ್ಕದು. ಬ್ಯಾಂಕಿನವರು ಮನೆಬಾಗಿಲಿಗೇ ಬಂದು, ಕೊಟ್ಟ ಗಡುವುಗಳೆಲ್ಲ ಮುಗಿದಿವೆ. ಇನ್ನು ನಮಗುಳಿದಿರುವುದು ಜಪ್ತಿಯ ನೋಟೀಸು ಜಾರಿಮಾಡುವುದು. ಅಷ್ಟರಲ್ಲಿ ತೀರಿಸುವೆಯೊ ನೋಡು ಎಂದು ಹೇಳಿ ಹೋಗಿದ್ದರು. ಹಾಗೇನಾದರು ಆದರೆ ಊರಿನಲ್ಲಿ ಮರ್ಯಾದೆ ಏನಾಗಬೇಡ? ಮರದ ನೆರಳಿನಲ್ಲಿಯೂ ಮಾರಪ್ಪ ಬಳಲಿದ.

ಮನಸ್ಸಿನಲ್ಲಿ ಸಾಲ, ಬಡ್ಡಿಯ ಚಿಂತೆ. ಕಣ್ಣಮುಂದೆ ಕೊಳೆಯುತ್ತಿರುವ ಈರುಳ್ಳಿಯ ರಾಶಿ. ಬೇಸಾಯ ಸಾಲದ ಬಲೆಗೆ ಬಿದ್ದಿದೆ. ಕೈಹತ್ತದ ಬೆಳೆ. ಕೈಕೊಡುವ ಬೆಲೆ. ಮಕ್ಕಳ ಓದಿನ ಚಿಂತೆಯ ಬೆಟ್ಟವನ್ನು ನೆತ್ತಿಗೇರಿಸಿದೆ. ನನ್ನಂತಹವರು ಸದಾ ಸಾಲದ ಮಕ್ಕಳು, ಕೊಡುವವರ ತೊತ್ತುಗಳು ಅನ್ನಿಸಿತು. ಈರುಳ್ಳಿ ರಾಶಿ ಸಾಲ ಮತ್ತು ಬಡ್ಡಿಯ ರಾಶಿಯಂತೆ ಕಾಣತೊಡಗಿತು. ಇದು ಎತ್ತಲಾಗದ ರಾಶಿ ಅನ್ನಿಸಿತು. ಬಲವಾದ ಸುಂಟರಗಾಳಿ ಎದ್ದು ಈ ರಾಶಿಯನ್ನು ಎತ್ತೊಯ್ದು ಮಸಣದಲ್ಲಿ ಚೆಲ್ಲಿ ಹೋಗಬಾರದೆ? ಬೆಲೆಯಿಲ್ಲದ್ದು ಗಾಳಿಗೆ ಹೋಯಿತು ಅನ್ನೊ ಸಮಾಧಾನವಾದರೂ ಆದೀತು ಅಂದುಕೊಂಡ.

ಮನೆಯತ್ತ ಹೊರಟಾಗ, ಈ ಬಿಸಿಲು ಹೆಣವನ್ನು ಸುಟ್ಟ ನಂತರದ ಕಿಚ್ಚಿನಂತಿದೆ. ನಡೆಯುವುದು ಕಷ್ಟವೆನಿಸಿತು. ಅದನ್ನು ಮರೆಯಲು ಮನೆಯೆಷ್ಟು ಹೆಜ್ಜೆ ದೂರಲ್ಲಿದೆಯೆಂದು ಎಣಿಸಬೇಕೆನ್ನಿಸಿತು. ನಡೆದಿದ್ದಷ್ಟು ದೂರ ಹಿಂದಕ್ಕೆ ನಡೆದು, ಹೆಜ್ಜೆಗಳನ್ನು ಎಣಿಸುತ್ತ ನಡೆಯುತ್ತಿದ್ದಾಗ ಈ ಹುಚ್ಚು ಏಕೆನಿಸಿತು. ಎಣಿಸುವುದನ್ನು ಬಿಟ್ಟ. ಮನೆಗೆ ಹೋಗಿ ಮಾಡುವುದೇನಿದೆ ಅನ್ನಿಸಿತು. ಹಿಂದಿರುಗಿ ಈರುಳ್ಳಿರಾಶಿಯ ಬಳಿಗೆ ಬಂದ. ಎಷ್ಟು ಕೊಳೆತಿದ್ದಾತು, ಮಾರಾಟವಾಗುವಾಗ್ಗೆ ಇನ್ನೆಷ್ಟು ಕೊಳೆತೀತೆಂದು ಅಂದಾಜಿಸುತ್ತ ನಿಂತ. ಈಗ ಆರಿಸಿದರೆ ಗಾಳಿಯಾಡದೆ ಅಡಿಯಲ್ಲಿರುವುದರಲ್ಲಿ ಅರ್ಧಭಾಗವಾದರೂ ಹೋದೀತು. ಆರಿಸಲೆ ಎಂದು ಯೋಚಿಸಿದ. ಹೊಟ್ಟೆ ಉರಿಸುವ